# 4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,
# ತುಮಕೂರು-ಮಧುಗಿರಿ

**S.C.No 5033/2019**

PW.57

CW.74

ದಿನಾಂಕಃ 23/12/2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

| | |
|---|---|
| **ಹೆಸರು** | ಮಂಜುನಾಥ ಬಿ.ಸಿ |
| **ತಂದೆಯ ಹೆಸರು** | ಚಂದ್ರಯ್ಯ. ಹೆಚ್ |
| **ವಯಸ್ಸು** | 40 ವರ್ಷ |
| **ಉದ್ಯೋಗ** | ಸಿಪಿಐ, ಪೊಲೀಸ್ ಪ್ರಧಾನ ಕಚೇರಿ, ಬೆಂಗಳೂರು |
| **ವಾಸಸ್ಥಳ** | ಬೆಂಗಳೂರು |

**ಮುಖ್ಯ ವಿಚಾರಣೆ ಸರ್ಕಾರಿ ಅಬಿಯೋಜಕರಿಂದ**

ನಾನು ಆಗಸ್ಟ್ 2016 ರಿಂದ ಮಾರ್ಚ್ 2020 ರವರೆಗೆ ಕೊರಟಗೆರೆ ಠಾಣೆಯಲ್ಲಿ ಪಿಎಸ್ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ಈ ಪ್ರಕರಣಕ್ಕೆ ಸಂಬಂದಿಸಿದಂತೆ ದಿನಾಂಕಃ 8-1-2019 ರಂದು ಬೆಳಿಗ್ಗೆ 9-30 ಗಂಟೆ ಸಮಯದಲ್ಲಿ ನಾನು ಠಾಣಾ ಪ್ರಭಾರದಲ್ಲಿದ್ದಾಗ ಪಿರ್ಯಾದಿದಾರರಾದ ಚಾಸಾಃ 1 ರವರು ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರನ್ನು ಸ್ವೀಕರಿಸಿ ಠಾಣಾ ಮೊಕದ್ದಮೆ ಸಂಖ್ಯೆ

8/2019 ರಲ್ಲಿ ಪ್ರಕರಣ ದಾಖಲಿಸಿ ಪ್ರ.ವ.ವರದಿಯನ್ನ ತಯಾರಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ ಮತ್ತು ಮೇಲಾಧಿಕಾರಿಗಳಿಗೆ ವರದಿ ಮಾಡಿದ್ದೇನೆ. ಸಾಕ್ಷಿ ದೂರನ್ನು ನೋಡಿ ಗುರುತಿಸಿದ್ದು ಅದು ಈಗಾಗಲೇ ನಿಪಿ.50 ಎಂದು ಗುರುತಾಗಿದ್ದು ಸಾಕ್ಷಿಯ ಸಹಿಯನ್ನು ನಿಪಿ.50(ಬಿ) ಎಂದು ಗುರುತಿಸಲಾಯಿತು. ಸಾಕ್ಷಿ ಪ್ರ.ವ.ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.102 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ.102(ಎ) ಎಂದು ಗುರುತಿಸಲಾಯಿತು.

ಸದರಿ ಪ್ರಕರಣವು ಘೋರ ಪ್ರಕರಣವಾದ ಕಾರಣ ಕಡತವನ್ನು ಅದೇ ದಿನ ಮುಂದಿನ ತನಿಖೆಗಾಗಿ ಚಾಸಾಃ 75 ರವರಿಗೆ ನಿವೇದಿಸಿಕೊಂಡಿದ್ದೇನೆ.

ದಿನಾಂಕಃ 16-1-2019 ರಂದು ಸದರಿ ಪ್ರಕರಣದಲ್ಲಿ ಕೊರಟಗೆರೆ ವೃತ್ತ ನಿರೀಕ್ಷಕರು ಆರೋಪಿಗಳ ಪತ್ತೆಗಾಗಿ ನನ್ನನ್ನು ನೇಮಿಸಿರುತ್ತಾರೆ. ಅದರಂತೆ ದಿನಾಂಕಃ 17-1-2019 ರಂದು ಠಾಣಾ ಸಿಬ್ಬಂದಿಗಳಾದ ಲಕ್ಷ್ಮೀನಾರಾಯಣ, ನಾರಾಯಣ, ಚನ್ನಮಲ್ಲಿಕಾರ್ಜುನ, ಸೋಮನಾಥ, ಪ್ರಶಾಂತ ಹಾಗೂ ರಮೇಶ ರವರ ಜೊತೆ ಬೆಳಿಗ್ಗೆ 6 ಗಂಟೆಗೆ ಕೊರಟಗೆರೆ ಠಾಣೆಯಲ್ಲಿದ್ದಾಗ ಬಾತ್ಮಿದಾರರಿಂದ ಆರೋಪಿಗಳ ಬಗ್ಗೆ ಖಚಿತ ಮಾಹಿತಿ ಬಂದಿದ್ದು ಆರೋಪಿಗಳು ತುಮಕೂರು ತಾಲ್ಲೂಕು ಕೆಸರಮಡಗು ಪೋಸ್ಟ್ ಅಣ್ಣಯ್ಯನಪಾಳ್ಯದ ಗ್ರಾಮದ ಆರೋಪಿ ದರಣೇಶ್ ತಂದೆ ಲಕ್ಷ್ಮೀಕಾಂತಯ್ಯನವರ ಜಮೀನಿನ ತೋಟದಲ್ಲಿ ಇರುವುದಾಗಿ ಮಾಹಿತಿ ಗೊತ್ತಾಯಿತು. ಬಳಿಕ ಠಾಣೆಯಿಂದ ನಾನು ಮತ್ತು ಮೇಲೆ ಹೇಳಿದ ಸಿಬ್ಬಂದಿಗಳು ಕೂಡಲೇ ಮೇಲೆ ಹೇಳಿದ ಅಣ್ಣಯ್ಯನಪಾಳ್ಯದ ಜಮೀನಿಗೆ ಹೋದೆವು. ಅಲ್ಲಿ ಆರೋಪಿಗಳಾದ ಬಸವರಾಜು, ಮಂಜುನಾಥ, ಕುಮಾರ ಆಲಿಯಾಸ್ ಕೆಂಗೆಂಟೆ ಕುಮಾರ, ಚಂದ್ರಶೇಖರ ಅಲಿಯಾಸ್ ದೋಬಿ ಚಂದ್ರ, ಲೋಕೇಶ ಅಲಿಯಾಸ್ ಗುಡ್ಡ, ಪುರುಷೋತ್ತಮ ಅಲಿಯಾಸ್ ಬೋಡಿ ರವರುಗಳು ಇದ್ದರು. ಅವರು ಸದರಿ ಪ್ರಕರಣದ ಅರೋಪಿಗಳು ಎಂದು ಖಾತ್ರಿಪಡಿಸಿದ ನಂತರ ಅವರನ್ನು ವಶಕ್ಕೆ ಪಡೆದು ಕೊರಟಗೆರೆ ವೃತ್ತನಿರೀಕ್ಷಕರ ಕಚೇರಿಗೆ ಬೆಳಿಗ್ಗೆ 8 ಗಂಟೆಗೆ ಕರೆದುಕೊಂಡು ಬಂದೆವು. ವರದಿಯ ಜೊತೆ ಅವರನ್ನು ಚಾಸಾಃ 75 ರವರ ಮುಂದೆ ಹಾಜರುಪಡಿಸಿದೆ. ನಾನು ನೀಡಿದ ವರದಿಯನ್ನು ಗುರುತಿಸಬಲ್ಲೆ. ಸಾಕ್ಷಿ ನಿಪಿ.101 ವರದಿ ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯ ಸಹಿಯನ್ನು ನಿಪಿ.101(ಬಿ) ಎಂದು ಗುರುತಿಸಲಾಯಿತು.

ದಿನಾಂಕಃ 7-3-2019 ರಂದು ಮಧುಗಿರಿ ಉಪವಿಭಾಗದ ಪೊಲೀಸ್ ಉಪಾಧೀಕ್ಷಕರು ಸದರಿ ಪ್ರಕರಣದಲ್ಲಿ ಬಾಗಿಯಾದ ಇನ್ನೋವ ಮತ್ತು ಪಾರ್ಚುನರ್ ಕಾರುಗಳನ್ನು ಪತ್ತೆಮಾಡಿಕೊಂಡು ಬರುವಂತೆ ನನ್ನನ್ನು ನೇಮಿಸಿದ್ದರು, ಅದರಂತೆ ದಿನಾಂಕಃ 19-3-2019 ರಂದು ಮೇಲೆ ಹೇಳಿದ ವಾಹನಗಳು ಅಣ್ಣಯ್ಯನಪಾಳ್ಯದ ಜಮೀನಿನ ತೋಟದಲ್ಲಿ ಇರುವ ಬಗ್ಗೆ ಮಾಹಿತಿ ಗೊತ್ತಾಯಿತು. ನಂತರ ಸಿಬ್ಬಂದಿಗಳಾದ ಚಂದ್ರಶೇಖರ್ ಹಾಗೂ ರೋಹಿತ್ ರವರ ಜೊತೆ ಮದ್ಯಾಹ್ನ 1 ಗಂಟೆಗೆ ಆ ಜಾಗಕ್ಕೆ ಹೋದೆ. ತೋಟದ ಮನೆಯ ಬಳಿ ಇದ್ದ ಮಾವಿನ ಮರದ ಬಳಿ ಮೇಲೆ ಹೇಳಿದ ಇನ್ನೋವಾ ಮತ್ತು ಪಾರ್ಚುನರಿ ಕಾರುಗಳು ಇದ್ದವು. ಕಾರುಗಳ ನಂಬರುಗಳನ್ನು ಪರಿಶೀಲಿಸಲಾಗಿ ಅವು ಪಾರ್ಚುನರ್ ಕಾರು ಕೆಎ-03 ಎಂಎಸ್-500 ಆಗಿತ್ತು. ಇನ್ನೋವಾ ಕಾರು ನಂಬರ್ ಕೆಎ-03 ಎಂಪಿ-4917 ಸಿಲ್ವರ್ ಬಣ್ಣದ ಇನ್ನೋವಾ ಕಾರು ಆಗಿತ್ತು. ಆ ಎರಡೂ ವಾಹನಗಳು ಈ ಪ್ರಕರಣಕ್ಕೆ ಸಂಬಂದಿಸಿದ್ದು ಎಂದು ಖಚಿತಪಡಿಸಿಕೊಂಡು ಅವುಗಳನ್ನು ಸಿಬ್ಬಂದಿಗಳ ಸಹಾಯದಿಂದ ಓಡಿಸಿಕೊಂಡು ಕೊರಟಗೆರೆ ಪೊಲೀಸ್ ಠಾಣಾ ಆವರಣಕ್ಕೆ ತಂದೆವು. ಕೊರಟಗೆರೆ ಠಾಣೆಯಲ್ಲಿ ಇದ್ದ ಮಧುಗಿರಿ ಡಿವೈ.ಎಸ್.ಪಿ ರವರಿಗೆ ಕಾರುಗಳನ್ನು ಹಾಜರುಪಡಿಸಿ ವರದಿ ನೀಡಿದ್ದೇನೆ. ಸಾಕ್ಷಿ ತಾನು ನೀಡಿದ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.103 ಮತ್ತು ಸಾಕ್ಷಿಯ ಸಹಿಯನ್ನು ನಿಪಿ.103(ಎ) ಎಂದು ಗುರುತಿಸಲಾಯಿತು.

ಕಾರುಗಳನ್ನು ನಾನು ತನಿಖಾದಿಕಾರಿಗಳಾದ ಚಾಸಾಃ 77 ರವರ ಮುಂದೆ ಹಾಜರುಪಡಿಸಿದ ಬಳಿಕ ಅವರು ಕೊರಟಗೆರೆ ಠಾಣಾ ಆವರಣದಲ್ಲಿ ವಾಹನ ಅಮಾತನ್ತುಪಂಚನಾಮೆಯನ್ನು ನಿಪಿ.88 ರಂತೆ ಮಾಡಿದ್ದಾರೆ. ಸಾಕ್ಷಿ ನಿಪಿ.88 ರಲ್ಲಿ ತನ್ನ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ.88(ಇ) ಎಂದು ಗುರುತಿಸಲಾಯಿತು.

ನಾನು ವಶಕ್ಕೆ ಪಡೆದು ತನಿಖಾಧಿಕಾರಿಗಳ ಮುಂದೆ ಹಾಜರುಪಡಿಸಿದ ಆರೋಪಿಗಳಾದ 6, 8 ರಿಂದ 12 ರವರನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿ ನ್ಯಾಯಾಲಯದ ಮುಂದ ಹಾಜರಿರುವ ಆರೋಪಿ 6, 8, 9, 10, 11, 12 ರವರನ್ನು ನೋಡಿ ಗುರುತಿಸಿರುತ್ತಾರೆ. ಅಮಾನತ್ತುಪಡಿಸಿದ ವಾಹನಗಳನ್ನು ನೋಡಿದರೆ ಗುರುತಿಸಬಲ್ಲೆ. ಸದರಿ ವಾಹನಗಳು ಈಗಾಗಲೇ ನ್ಯಾಯಾಲಯದ ಆದೇಶದಂತೆ ಮಾಲೀಕರಿಗೆ ಬಿಡುಗಡೆ

ಮಾಡಲಾಗಿದ್ದು ಗುರುತಿಸಲು ತಕರಾರು ಇಲ್ಲ ಎಂದು ಆರೋಪಿ ಪರ ವಕೀಲರು ನುಡಿಯುತ್ತಾರೆ.

**ಪಾಟೀ ಸವಾಲುಃ ಆರೋಪಿಗಳ ಪರಃ ಶ್ರೀ.ಟಿ.ಎಸ್.ಕೆ ವಕೀಲರಿಂದ**

ವಕೀಲರು ಕಾಲಾವಕಾಶ ಕೋರಿದ್ದು, ಸಕಾರಣವಿಲ್ಲ ಆದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರು ವಿಚಾರಣೆಃ** ಇಲ್ಲ

(ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಒ ತಿ ಹೇ ಸ ಇದೆ.

4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ತುಮಕೂರು-ಮಧುಗಿರಿ.